RNU AIR DHARWAD

MARCH 14, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಆಕಾಶವಾಣಿಯ ನಮ್ಮ ಆತ್ಮೀಯ ಕೇಳುಗರಿಗೆಲ್ಲ, ಬಣ್ಣಗಳ ಹಬ್ಬ, ಹೋಳಿಯ ಹಾರ್ದಿಕ ಶುಭಾಶಯಗಳು.**

<><><>

**ಮುಖ್ಯಾಂಶಗಳು**

<><><>

- **ತುಂಗಭದ್ರಾ ನದಿ ಹೂಳು; ಕೇಂದ್ರದೊಂದಿಗೆ ಇದೇ 18 ರಂದು, ಪರಿಹಾರೋಪಾಯಗಳ ಚರ್ಚೆ – ಡಿ.ಕೆ. ಶಿವಕುಮಾರ.**
- **ರಾಜ್ಯದ ಪ್ರತಿ ಪೊಲೀಸ್ ಠಾಣೆಯಲ್ಲಿ, ಸಾಮಾಜಿಕ ಜಾಲತಾಣಗಳ ನಿಗಾ ಘಟಕ ಕಾರ್ಯಪ್ರವೃತ್ತ – ಜಿ. ಪರಮೇಶ್ವರ.**
- **ರೈತರು ದೇಶಿ ತಳಿ ಬೀಜಗಳನ್ನು ಸಂರಕ್ಷಿಸಿ, ಬಳಸುವಂತೆ ಉತ್ತೇಜಿಸಲು, ಕೇಂದ್ರದಿಂದ ಕಾರ್ಯ ಯೋಜನೆ – ಪಿ.ಎಲ್. ಪಾಟೀಲ.**
- **ಚಿತ್ರದುರ್ಗ ಜಿಲ್ಲೆಯ, ಬ್ರಹ್ಮಗಿರಿ ಬೆಟ್ಟದಲ್ಲಿ, ಉತ್ಖನನ; 58 ಐತಿಹಾಸಿಕ ವಸ್ತುಗಳು ಪತ್ತೆ.**

<><><>

**ಈಗ ವಾರ್ತೆಗಳ ವಿವರ**

<><><>

**ಇಂದು ಹೋಳಿ ಹುಣ್ಣಿಮೆ. ಕಾಷ್ಠ ಶಿಲ್ಪದ ಕಾಮದೇವ ಹಾಗೂ ರತಿದೇವಿಯರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, 5 ದಿನಗಳ ಕಾಲ ಪೂಜಿಸಿ, ನಿನ್ನೆ ಮಧ್ಯರಾತ್ರಿ, ಸಾಂಕೇತಿಕವಾಗಿ ಕೆಲವೆಡೆ ಮತ್ತು ಹಲವೆಡೆ ಇಂದು, ಕಾಮ ದಹನ ಕೈಗೊಂಡು, ಬಣ್ಣದೋಕುಳಿ ಆಚರಿಸಲಾಗುತ್ತಿದೆ. ಹೋಳಿ ಹಬ್ಬದ ಸಂಭ್ರಮ ನಾಡಿನಾದ್ಯಂತ ಕಳೆಗಟ್ಟಿದೆ. ನಾಡಿನ ಜನತೆಗೆ ಗಣ್ಯರು ಶುಭಾಶಯ ಕೋರಿದ್ದಾರೆ.**

<><><>

**ಹಾವೇರಿಯಲ್ಲಿ ಇಂದು ಸಂಜೆ 6 ಗಂಟೆಗೆ, ಪ್ರಯಾಗರಾಜ್ ಮಹಾ ಕುಂಭಮೇಳದ ಮಾದರಿ ದೃಶ್ಯಗಳನ್ನು ಮರು ಸೃಷ್ಟಿಸಿ, ಸೊಬಗಿನ ಮೆರವಣಿಗೆ ನಡೆಯಲಿದೆ ಎಂದು, ಹೋಳಿ ಹಬ್ಬದ ಆಚರಣಾ ಸಮಿತಿ ಅಧ್ಯಕ್ಷ, ವಿಜಯಕುಮಾರ ಚಿನ್ನಿಕಟ್ಟಿ ತಿಳಿಸಿದ್ದಾರೆ.**

<><><>

ಬಾಗಲಕೋಟೆಯಲ್ಲಿ ಹೋಳಿ ಹಬ್ಬದಾಚರಣೆಗೆ, ವಿಶೇಷ ವ್ಯವಸ್ಥೆ ಕೈಗೊಳ್ಳಲಾಗಿದೆ. ಸೋಗಿನ ಮೆರವಣಿಗೆ ನಡೆಯಲಿದೆ.

<><><>

ಧಾರವಾಡ ಜಿಲ್ಲೆ, ನವಲಗುಂದದ ಶ್ರೀ ರಾಮಲಿಂಗೇಶ್ವರ ಕಾಮದೇವ ಹಾಗೂ ರತಿ ದೇವಿಯ ಕಾಷ್ಠ ಶಿಲ್ಪಗಳ ದರ್ಶನವನ್ನು ಲಕ್ಷಾಂತರ ಭಕ್ತಾದಿಗಳು ಪಡೆದಿದ್ದಾರೆ.

<><><>

ಉತ್ತರ ಕರ್ನಾಟಕ ಭಾಗದಲ್ಲಿ, ಹೋಳಿ ಹುಣ್ಣಿಮೆಗೆ ಜಾನಪದೀಯ ಸೊಗಡಿದೆ. ಆಚರಣೆಯಲ್ಲಿ, ಹಿರಿಯರ ಲಾವಣಿ ಪದಗಳ ಸೊಬಗಿದೆ. ಉತ್ತರಕನ್ನಡ ಜಿಲ್ಲೆ ಶಿರಸಿಯಲ್ಲಿ, ಪ್ರಸಿದ್ಧ ಜಾನಪದ ಕುಣಿತ ಬೇಡರ ವೇಶ ಇಂದು ಬೆಳಗಿನ ಜಾವ ಸಂಪನ್ನಗೊಂಡಿತು. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಶಿರಸಿಯ ಹಿರಿಯ ಪತ್ರಕರ್ತ, ರಾಘವೇಂದ್ರ ಬೆಟ್ಟಕೊಪ್ಪ.

<><><>

ರಾಘವೇಂದ್ರ ಬೆಟ್ಟಕೊಪ್ಪ ಧ್ವನಿ 50 ಸೆಕೆಂದುಗಳು

<><><>

ಕೇಂದ್ರ ಜಲಶಕ್ತಿ ಖಾತೆ ಸಚಿವರು, ಪೆನ್ನಾರ್ ನದಿ ನೀರಿನ ವಿಚಾರವಾಗಿ, 18ನೇ ತಾರೀಖು, ಕರ್ನಾಟಕ ಹಾಗೂ ತಮಿಳುನಾಡಿನ ಜಲ ಸಂಪನ್ಮೂಲ ಖಾತೆ ಸಚಿವರನ್ನು, ಚರ್ಚೆಗೆ ಕರೆದಿದ್ದು, ಅಂದು ನವಲಿ ಅಣೆಕಟ್ಟು ನಿರ್ಮಾಣ ಹಾಗೂ ಪರ್ಯಾಯ ಪರಿಹಾರೋಪಾಯದ ಬಗ್ಗೆ, ಚರ್ಚಿಸುವುದಾಗಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಅವರು ಮಾತನಾಡಿದರು. ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿದ್ದು, ವ್ಯರ್ಥವಾಗಿ ಹರಿಯುತ್ತಿರುವ 27 ಟಿ.ಎಂ.ಸಿ. ನೀರಿನ ಸದ್ಬಳಕೆಗೆ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು. ಇದಕ್ಕಾಗಿ ನವಲಿ ಸಮಾನಾಂತರ ಜಲಾಶಯ ನಿರ್ಮಾಣ ಹಾಗೂ ಪಂಪ್ ಮಾಡಿ ನೀರು ಬಳಸಿಕೊಳ್ಳುವ ಪರ್ಯಾಯ ಯೋಜನೆ ಬಗ್ಗೆ, ಸರ್ಕಾರ ಆಲೋಚಿಸುತ್ತಿದೆ ಎಂದು ಅವರು ಹೇಳಿದರು.

<><><>

ಕೃಷ್ಣ ಅಚ್ಚುಕಟ್ಟು ಪ್ರದೇಶದ ಕಾಲುವೆಗಳಿಗೆ, ನೀರು ಹರಿಸುವ ಕುರಿತು, ಇಂದು ಸಂಜೆ 4 ಗಂಟೆಗೆ, ಬೆಂಗಳೂರಿನಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ಕರೆಯಲಾಗಿದೆ ಎಂದು, ಯಾದಗಿರಿ ಜಿಲ್ಲೆ, ಸುರಪುರ ಶಾಸಕ ರಾಜಾ ವೇಣುಗೋಪಾಲ ನಾಯಕ್ ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಹಿಂಗಾರು ಹಂಗಾಮಿನಲ್ಲಿ ಬೆಳೆಯಲಾದ, ಶೇಂಗಾ, ಸಜ್ಜೆ, ಭತ್ತ ಸೇರಿ, ಇತರೆ ಬೆಳೆಗಳಿಗೆ, ಏಪ್ರಿಲ್ 10ರ ವರೆಗೆ ನೀರು ಹರಿಸುವಂತೆ, ರೈತರ ಒತ್ತಾಯದ ಹಿನ್ನೆಲೆ, ಈ ಸಭೆ ಕರೆಯಲಾಗಿದೆ ಎಂದು, ಹೇಳಿದರು.

<><><>

ಈ ಮಧ್ಯೆ, ಯಾದಗಿರಿ ಜಿಲ್ಲೆ, ಹುಣಸಗಿ ತಾಲೂಕಿನ ನಾರಾಯಣಪುರ ಎಡದಂಡೆ ಕಾಲುವೆಗೆ, ಏಪ್ರಿಲ್ 10ರ ವರೆಗೆ, ನಿರಂತರವಾಗಿ ನೀರು ಹರಿಸುವಂತೆ ಅವರು, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

<><><>

ರಾಯಚೂರಿನಲ್ಲಿ ನಿನ್ನೆ, ರೈತ ಸಂಘಟನೆಗಳ ಮುಖಂಡರು, ನೀರಿಗಾಗಿ ಆಗ್ರಹಿಸಿ, ಪ್ರತಿಭಟನೆ ನಡೆಸಿದರು.

<><><>

ಯಾದಗಿರಿ ಜಿಲ್ಲೆ, ಸುರಪುರ ತಾಲೂಕಿನ ಎರಡು ಗ್ರಾಮಗಳಲ್ಲಿ ಟ್ಯಾಂಕರ್, 9 ಕಡೆ ಬಾಡಿಗೆ ಕೊಳವೆ ಬಾವಿಗಳ ಮೂಲಕ, ಕುಡಿಯುವ ಸರಬರಾಜು ಮಾಡಲಾಗುತ್ತಿದೆ. ಜಿಲ್ಲಾ ಪಂಚಾಯಿತಿ ಸಿ.ಇ.ಓ. ಲವೀಶ್ ಒರಡಿಯಾ, ಈ ಕುರಿತು ಮಾಹಿತಿ

ನೀಡಿ, ಪ್ರಸಕ್ತ ಬೇಸಿಗೆಯಲ್ಲಿ, ಜಿಲ್ಲೆಯ 91 ಗ್ರಾಮಗಳನ್ನು, ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳೆಂದು ಗುರುತಿಸಿದ್ದಾಗಿ, ತಿಳಿಸಿದರು. ಶಹಾಪುರ ತಾಲೂಕಿನ 16, ವಡಗೇರಾ ತಾಲೂಕಿನ 11, ಯಾದಗಿರಿ ತಾಲೂಕಿನ 8, ಗುರುಮಠಕಲ್ ತಾಲೂಕಿನ 19, ಸುರಪುರ ತಾಲೂಕಿನ 16 ಮತ್ತು ಹುಣಸಗಿ ತಾಲೂಕಿನ 21 ಹಳ್ಳಿಗಳನ್ನು, ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳೆಂದು ಜಿಲ್ಲಾಡಳಿತ ಗುರುತಿಸಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ರಾಜ್ಯದ ಪ್ರತಿ ಪೊಲೀಸ್ ಠಾಣೆಯಲ್ಲಿ, ಸಾಮಾಜಿಕ ಜಾಲತಾಣ ನಿಗಾ ಘಟಕ ಸ್ಥಾಪಿಸಲಾಗಿದೆ ಎಂದು, ಗೃಹ ಖಾತೆ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ. ವಿಧಾನ ಪರಿ 'ತ್ತಿನ ಪ್ರಶ್ನೋತ್ತರ ಕಲಾಪದಲ್ಲಿ, ಸದಸ್ಯರ ಪ್ರಶ್ನೆಗೆ ಉತ್ತರಿಸಿದ ಸಚಿವರು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿ, ಗಲಭೆ ಸೃಷ್ಟಿಸುವವರ ವಿರುದ್ಧ, ಸ್ವಯಂ ಪ್ರೇರಿತವಾಗಿ, ಪ್ರಕರಣಗಳನ್ನು ದಾಖಲಿಸಿಕೊಂಡು ಕಾನೂನು ರೀತ್ಯಾ ಕ್ರಮ ಕೈಗೊಂಡು, ಸಾರ್ವಜನಿಕರ ನೆಮ್ಮದಿಯನ್ನು ಕಾಪಾಡಲು, ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ರಾಜ್ಯದ ವಿವಿಧ ಕಾರಾಗೃಹಗಳಲ್ಲಿನ ಕಾನೂನು ಬಾಹಿರ ಚಟುವಟಿಕೆಗಳ ತಡೆಗೆ, ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು, ಅವರು ಸ್ಪಷ್ಟ ಪಡಿಸಿದರು.

<><><>

ರೈತರು ದೇಶಿ ತಳಿ ಬೀಜಗಳನ್ನು ಸಂರಕ್ಷಿಸಿ, ಬಳಸುವಂತೆ ಉತ್ತೇಜಿಸಲು, ಕೇಂದ್ರ ಸರ್ಕಾರ ಕಾರ್ಯಯೋಜನೆ ರೂಪಿಸಿದೆ ಎಂದು, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ, ಪಿ.ಎಲ್.ಪಾಟೀಲ ತಿಳಿಸಿದ್ದಾರೆ. ಹೊಸ ದಿಲ್ಲಿಯ, ಸಸ್ಯ ತಳಿ ಸಂರಕ್ಷಣೆ ಹಾಗೂ ರೈತರ ಹಕ್ಕುಗಳ ಪ್ರಾಧಿಕಾರ ರೈತರಿಗಾಗಿ ಏರ್ಪಡಿಸಿದ್ದ, 'ಸಸ್ಯ ಪ್ರಭೇದಗಳ ಸಂರಕ್ಷಣೆ ಮತ್ತು ರೈತರ ಹಕ್ಕುಗಳು" ಕುರಿತ, ಶಿಬಿರದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ರಕ್ತ ಹೀನತೆ, ಸೂಕ್ಷ್ಮ ಪೋಷಕಾಂಶಗಳ ಕೊರತೆ ನೀಗಿಸುವಲ್ಲಿ, ದೇಶಿ ತಳಿಗಳ ಪ್ರಾಮುಖ್ಯತೆ, ಸಸ್ಯ ಸಂರಕ್ಷಣಾ ಪ್ರಾಧಿಕಾರಕ್ಕೆ ಅಂತಹ ತಳಿ ಒದಗಿಸಿ, ಲಾಭ ಪಡೆಯುವ ಬಗ್ಗೆ, ರೈತರಿಗೆ ಅವರು ಮಾಹಿತಿ ನೀಡಿದರು.

<><><>

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲೂಕಿನ, ಬ್ರಹ್ಮಗಿರಿ ಬೆಟ್ಟದಲ್ಲಿ, ಉತ್ಖನನದ ವೇಳೆ ವಿವಿಧ 58 ಮಾದರಿಗಳು ಪತ್ತೆಯಾಗಿವೆ. ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆಯ, ಬಿಪಿನ್ ಚಂದ್ರ, ಅಮೆರಿಕದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ತಜ್ಞರ ತಂಡ, ನೂತನ ತಂತ್ರಜ್ಞಾನ ಬಳಸಿ, ಉತ್ಖನನ ಕಾರ್ಯ ಕೈಗೊಂಡಿದೆ. ಉತ್ಖನನದಲ್ಲಿ ದೊರೆತ ಪ್ರತಿ ವಸ್ತು ದಾಖಲಿಸಲಾಗುತ್ತಿದೆ. ಜನ ವಸತಿ ಸಮಯ, ಆಹಾರ ಪದ್ಧತಿ, ಜೀವನ ಶೈಲಿ ಬಗ್ಗೆ ಮಹತ್ವದ ಸುಳಿವುಗಳು ಲಭ್ಯವಾಗಿವೆ.

<><><>

ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡುವ, 'ನಾಗಡಿಕೆರೆ ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ' ದತ್ತಿ ಪ್ರಶಸ್ತಿಗೆ, ಉತ್ತರಕನ್ನಡ ಜಿಲ್ಲೆಯ ಹಿರಿಯ ಪತ್ರಕರ್ತ, ರವೀಂದ್ರ ಭಟ್ ಐನಕೈ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 10 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಕನ್ನಡ ಪತ್ರಿಕೋದ್ಯಮದಲ್ಲಿ ಮಹತ್ವದ ಕೆಲಸ ಮಾಡಿದ ಪತ್ರಕರ್ತರಿಗೆ, ಈ ಪ್ರಶಸ್ತಿಯನ್ನು ಪ್ರದಾನ ಮಾಡಿ, ಗೌರವಿಸಲಾಗುತ್ತದೆ. ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ರವೀಂದ್ರ ಭಟ್, ಐನಕೈ.

<><><>

ರವೀಂದ್ರ ಭಟ್, ಐನಕೈ ಧ್ವನಿ 50 ಸೆಕೆಂದುಗಳು

<><><>

ಬೆಂಗಳೂರಿನ, ಸಂಚಾರ ನಿರ್ವಹಣೆ ದೀಪ ಕಂಬಗಳಲ್ಲಿ, 'ವಿ-ಎ-ಸಿ', 'ವ್ಯಾಕ್' ಎಂಬ ಹೊಸ ವ್ಯವಸ್ಥೆ ಅಳವಡಿಸಲಾಗಿದೆ. 'ವೆಹಿಕಲ್ ಆಕ್ಚುಯೇಟೆಡ್ ಕಂಟ್ರೋಲ್, ಸಕ್ಷಮ ಸಂಚಾರ ನಿರ್ವಹಣೆ, ಸ್ಮಾರ್ಟ್ ಟ್ರಾಫಿಕ್ ಕಂಟ್ರೋಲ್ ವ್ಯವಸ್ಥೆಯಾಗಿದೆ. 'ವ್ಯಾಕ್' ಕೃತಕ ಬುದ್ಧಿಮತ್ತೆ ಆಧಾರಿತವಾಗಿದ್ದು, ರಸ್ತೆಗಳಲ್ಲಿ ವಾಹನಗಳ ದಟ್ಟಣೆಯನ್ನು, ನೈಜ ಸಮಯದಲ್ಲಿ ಗಮನಿಸಿ, ಅದಕ್ಕೆ ಅನುಗುಣವಾಗಿ ಸಿಗ್ನಲ್ ಸಮಯವನ್ನು ಬದಲಾಯಿಸುತ್ತದೆ. ಟ್ರಾಫಿಕ್‌ಅನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಇದು ಸಹಾಯ ಮಾಡುತ್ತಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಚಿಕ್ಕಮಗಳೂರು ಜಿಲ್ಲೆಯಲ್ಲಿ, ಕಳೆದ ಜನವರಿಯಿಂದ ಇಲ್ಲಿಯ ವರೆಗೆ, 56 ಕಾಡ್ಗಿಚ್ಚು ಪ್ರಕರಣಗಳು ದಾಖಲಾಗಿವೆ. 300 ಎಕರೆಗೂ ಹೆಚ್ಚು ಅರಣ್ಯ ಪ್ರದೇಶ ನಾಶವಾಗಿದೆ ಎಂದು, ಅರಣ್ಯ ಇಲಾಖೆ ಮಾಹಿತಿ ನೀಡಿದೆ.

<><><>

ತಾಪಮಾನ ಏರುಗತಿಯಲ್ಲಿದ್ದು, ಬಿಸಿ ಗಾಳಿ ಬೀಸುತ್ತಿರುವ ಹಿನ್ನೆಲೆ, ಜನ-ಜಾನುವಾರು ಕ್ಷೇಮಪಾಲನೆಗಾಗಿ, ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಅವರ ಅಧ್ಯಕ್ಷತೆಯಲ್ಲಿ ಜರುಗಿತು.

<><><>

ಕಲಬುರಗಿಯಲ್ಲಿ ಗರಿಷ್ಠ 39 ದಶಾಂಶ 1 ಡಿಗ್ರಿ ಸೆಲ್ಸಿಯಸ್, ವಿಜಯಪುರ ಹಾಗೂ ಬೆಳಗಾವಿ ವಿಮಾನ ನಿಲ್ದಾಣದಲ್ಲಿ, ಕನಿಷ್ಠ 18 ಡಿಗ್ರಿ ತಾಪಮಾನ ದಾಖಲಾಗಿದೆ.

<><><>

ಚಿಕ್ಕಮಗಳೂರು, ಇನಾಂ ದತ್ತ ಪೀಠದಲ್ಲಿ, ನಾಳೆಯಿಂದ 17ರ ವರೆಗೆ, ಉರುಸ್ ನಡೆಯಲಿದೆ. ಪ್ರವಾಸಿ ತಾಣಗಳ ಭೇಟಿಯನ್ನು, ಜಿಲ್ಲಾಧಿಕಾರಿ ನಿಷೇಧಿಸಿದ್ದಾರೆ.

<><><>

ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ. ವೀರಪ್ಪ ವಿಜಯಪುರ ಜಿಲ್ಲೆಯ ಪ್ರವಾಸ ಕೈಗೊಂಡಿದ್ದಾರೆ. ಇಂದು ಮತ್ತು ನಾಳೆ, ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು**

<><><>

- **ತುಂಗಭದ್ರಾ ನದಿ ಹೂಳು; ಕೇಂದ್ರದೊಂದಿಗೆ ಇದೇ 18 ರಂದು, ಪರಿಹಾರೋಪಾಯಗಳ ಚರ್ಚೆ – ಡಿ.ಕೆ. ಶಿವಕುಮಾರ.**
- **ರಾಜ್ಯದ ಪ್ರತಿ ಪೊಲೀಸ್ ಠಾಣೆಯಲ್ಲಿ, ಸಾಮಾಜಿಕ ಜಾಲತಾಣಗಳ ನಿಗಾ ಘಟಕ ಕಾರ್ಯಪ್ರವೃತ್ತ – ಜಿ. ಪರಮೇಶ್ವರ.**
- **ರೈತರು ದೇಶಿ ತಳಿ ಬೀಜಗಳನ್ನು ಸಂರಕ್ಷಿಸಿ, ಬಳಸುವಂತೆ ಉತ್ತೇಜಿಸಲು, ಕೇಂದ್ರದಿಂದ ಕಾರ್ಯ ಯೋಜನೆ – ಪಿ.ಎಲ್. ಪಾಟೀಲ.**
- **ಚಿತ್ರದುರ್ಗ ಜಿಲ್ಲೆಯ, ಬ್ರಹ್ಮಗಿರಿ ಬೆಟ್ಟದಲ್ಲಿ, ಉತ್ಖನನ; 58 ಐತಿಹಾಸಿಕ ವಸ್ತುಗಳು ಪತ್ತೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>